MVC No.162/2020
RW-01

ದಿನಾಂಕಃ 01-04-2026.
ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀ RMH ಮಾನ್ಯ ವಕೀಲರಿಂದ ಃ**

2. ಕ್ರಮ ಸಂಖ್ಯೆ 1 ರಿಂದ 52 ರವರೆಗಿನ ಮೆಡಿಕಲ್ ಬಿಲ್ಲುಗಳನ್ನು ಒಟ್ಟಾಗಿ ನಿ.ಆರ್.1 ಎಂದು ಗುರುತಿಸಲಾದವು. ಪ್ರಸ್ತುತ ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟಿ ಸವಾಲುಃ ಅರ್ಜಿದಾರರ ಪರ ಶ್ರೀ ಮಾನ್ಯ SS ವಕೀಲರಿಂದ :**

3. ನನ್ನ ಹೆಸರಿನಲ್ಲಿ ಮೋಟಾರ ಸೈಕಲ ನಂಬರ KA-40-K-3748 ಇರುತ್ತದೆ. 2 ನೇ ಎದುರುದಾರರು ನನ್ನ ಮಗ. 2 ನೇ ಎದುರುದಾರರು ಮೋಟಾರ ಸೈಕಲನ್ನು ನಡೆಸಲು DL ನ್ನು ಹೊಂದಿರುತ್ತಾರೆ. 2 ನೇ ಎದುರುದಾರರು DL ನ್ನು ಹೊಂದಿರುತ್ತಾರೆ ಎಂದು ತೋರಿಸಲು ದಾಖಲೆಯನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. 2018 ರಲ್ಲಿ 2 ನೇ ಎದುರುದಾರರು ಎಷ್ಟು ವಯಸ್ಸಿನವರು ಆಗಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ದಿಃ 15-10-2018 ರಂದು ನಾನು 2 ನೇ ಎದುರುದಾರರಿಗೆ ಸದರಿ ಮೋಟಾರ ಸೈಕಲನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ದಿನದಂದು 2 ನೇ ಎದುರುದಾರರು ಸದರಿ ಮೋಟಾರ ಸೈಕಲನ್ನು ಅತಿ ವೇಗವಾಗಿ ಓಡಿಸಿ ಮೃತ ಮಲ್ಲಣ್ಣ ಇವರಿಗೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಅಪಘಾತವನ್ನು ನೋಡಿರುವುದಿಲ್ಲ. ನಾನು ಮೃತ ಮಲ್ಲಣ್ಣ ಇವರನ್ನು ನೋಡಿರುವುದಿಲ್ಲ. ಸದರಿ ಮೃತ ಮಲ್ಲಣ್ಣ ಇವರು ಶಹಾಪೂರಿನಲ್ಲಿ ಹಮಾಲಿ ಕೆಲಸವನ್ನು ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಮೃತ ಮಲ್ಲಣ್ಣ ಇವರಿಗೆ ಸದರಿ ಅಪಘಾತವಾಗಿದ್ದಾಗ ಅವರ ವಯಸ್ಸು ಎಷ್ಟು ವಯಸ್ಸು ಇತ್ತು

ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಅಪಘಾತವಾಗಿದ್ದ ಸಂದರ್ಭದಲ್ಲಿ ಸದರಿ ಮೃತ ಮಲ್ಲಣ್ಣ ಇವರು 55 ವರ್ಷ ವಯಸ್ಸಿನವರಾಗಿದ್ದು, ಅವರು ಹಮಾಲಿ ಕೆಲಸವನ್ನು ಮಾಡಿಕೊಂಡು ಪ್ರತಿನಿತ್ಯ ರೂ.1000/- ಗಳ ಆದಾಯವನ್ನು ಹೊಂದಿದ್ದರು ಎಂದರೆ ಸರಿಯಲ್ಲ. 2 ನೇ ಎದುರುದಾರರು ಸದರಿ ಮೃತ ಮಲ್ಲಣ್ಣ ಇವರಿಗೆ ಅಪಘಾತಪಡಿಸಿರುವುದು ಹಾಗೂ ಸದರಿ ಮೃತ ಮಲ್ಲಣ್ಣ ಇವರು ಸದರಿ ಕೆಲಸವನ್ನು ಮಾಡಿಕೊಂಡಿದ್ದ ಬಗ್ಗೆ ನನಗೆ ಗೊತ್ತಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಸದರಿ ಮೃತ ಮಲ್ಲಣ್ಣ ಇವರಿಗೆ ಶಹಾಪೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿರುತ್ತದೆ ಎಂದರೆ ಸರಿ. ಪಂಚಾಯ್ತಿ ಆಗಿದ್ದರಿಂದ ನಾನು ಅವರನ್ನು ಕಲಬುರಗಿಯ ಒಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದು ಆದರೆ ಯಾವ ಆಸ್ಪತ್ರೆ ಎಂದು ಗೊತ್ತಿರುವುದಿಲ್ಲ. ನಾನು ಸದರಿ ಮೃತ ಮಲ್ಲಣ್ಣ ಇವರನ್ನು ಕಲಬುರಗಿಯ ಸದರಿ ಆಸ್ಪತ್ರೆಯಲ್ಲಿ ಒಟ್ಟು 8 ದಿವಸ ಚಿಕಿತ್ಸೆ ಕೊಡಿಸಿದ್ದು ಆದರೆ ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಎಂದು ನನಗೆ ನೆನಪಿರುವುದಿಲ್ಲ. ನಾನು ನಿ.ಆರ್1 ನ್ನು ಹಾಜರುಪಡಿಸಿದ್ದು ಯಾವ ಯಾವ ದಿನಾಂಕದಂದು ಸದರಿ ಮೃತ ಮಲ್ಲಣ್ಣ ಇವರ ಚಿಕಿತ್ಸೆಗಾಗಿ ಖರ್ಚು ಮಾಡಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ನಿಆರ್.1 ನ್ನು ಕಲಬುರಗಿಯ ಆಸ್ಪತ್ರೆಯಿಂದ ತಂದಿದ್ದು ಆದರೆ ಯಾವ ಆಸ್ಪತ್ರೆ ಎಂದು ನೆನಪಿರುವುದಿಲ್ಲ. ನಾನು ನಿ.ಆರ್.1 ರಂತೆ ದಾಖಲೆಗಳನ್ನು 1 ವರ್ಷದಿಂದ ಪಡೆದುಕೊಂಡಿರುತ್ತೇನೆ. ನಿ.ಆರ್.1 ರ ದಾಖಲೆಗಳು ಮಲ್ಲಣ್ಣ ಇವರ ಹೆಸರಿನಲ್ಲಿರುತ್ತವೆ. ನಾನು ಮೃತ ಮಲ್ಲಣ್ಣ ಇವರ ಚಿಕಿತ್ಸೆಗಾಗಿ ಯಾವ ಯಾವ ತಿಂಗಳು ಎಷ್ಟೇಷ್ಟು ಹಣವನ್ನು ಕೊಟ್ಟಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ಮೃತ ಮಲ್ಲಣ್ಣ ಇವರು ತೀರಿಕೊಂಡಾಗ ಯಾರೋ ನನಗೆ ರೂ.25,000/ ಗಳನ್ನು ಕೊಡಲು ಹೇಳಿದ್ದು ನಾನು ಕೊಟ್ಟಿದ್ದು ಆದರೆ ಯಾರಿಗೆ ಎಂದು ಹೇಳಲು ಬರುವುದಿಲ್ಲ. ಮೃತ ಮಲ್ಲಣ್ಣ

ಇವರ ಚಿಕಿತ್ಸೆಗಾಗಿ ಪಿ.ಆರ್.1 ರಂತೆ ಹಣವನ್ನು ಖರ್ಚು ಮಾಡಿರುತ್ತೇನೆ ಎಂದು ಹೇಳಲು ಅವರ ಕುಟುಂಬದವರಿಂದ ಯಾವುದೇ ರಶೀದಿ ಪಡೆದುಕೊಂಡಿರುವುದಿಲ್ಲ. ಸದರಿ ಅಪಘಾತವಾದ 2-3 ದಿನಗಳ ನಂತರ ಶಹಾಪೂರಿನಲ್ಲಿ ಸದರಿ ಪಂಚಾಯ್ತಿ ಆಗಿರುತ್ತದೆ. ಸದರಿ ಪಂಚಾಯ್ತಿ ಯಾವ ದಿನಾಂಕದಂದು ಆಗಿರುತ್ತದೆ ಹಾಗೂ ಸದರಿ ಪಂಚಾಯ್ತಿಯಲ್ಲಿ ಯಾರು ಯಾರು ಹಾಜರಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಅಪಘಾತವಾದ 10 ದಿನಗಳ ನಂತರ ಸದರಿ ಮಲ್ಲಣ್ಣ ಇವರು ತೀರಿಕೊಂಡಿರುತ್ತಾರೆ. ಸದರಿ ಮೃತ ಮಲ್ಲಣ್ಣ ಇವರಿಗೆ ನಾನೇ ಚಿಕಿತ್ಸೆ ಕೊಡಿಸಿರುತ್ತೇನೆ ಹಾಗೂ ಅದಕ್ಕಾಗಿ ಹಣ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಹಾಗೂ ಸದರಿ ಪಂಚಾಯ್ತಿ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿ.ಆರ್.1 ರಂತೆ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರದ ಹಣವನ್ನು ಕೊಡಬೇಕಾಗುತ್ತದೆ ಎಂದು ಹೇಳಿ ಪಿ.ಆರ್.1 ರಂತೆ ದಾಖಲೆಗಳನ್ನು ಸುಳ್ಳು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ